ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	752 (883)
2)	ಮಾನ್ಯ ಸದಸ್ಯರ ಹೆಸರು	ಶ್ರೀ ಎಂ.ಎ.ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3)	ಉತ್ತರಿಸಬೇಕಾದ ದಿನಾಂಕ	20-09-2021
4)	ಉತ್ತರಿಸುವವರು	ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಪ್ರಶ್ನೆ	ಉತ್ತರ
ಅ). ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಸರ್ಕಾರವು ಜಾರಿಗೊಳಿಸುತ್ತಿರುವ ಯೋಜನೆ / ಕಾರ್ಯಕ್ರಮಗಳು ಯಾವುವು; ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡಗಳು ಯಾವುವು; (ವಿವರ ನೀಡುವುದು)	**<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ :</u>** ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯನ್ನು ಹಾಗೂ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದ ಯುವ ಜನತೆಗೆ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉದ್ಯೋಗ ಕಲ್ಪಿಸುವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನಿಗದಿಪಡಿಸಲಾಗಿರುವ ಮಾರ್ಗಸೂಚಿಗಳನ್ವಯ ರಾಜ್ಯದಾದ್ಯಂತ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳನ್ನು ಜಾರಿಗೊಳಿಸಲಾಗಿರುತ್ತದೆ. ಅದರಂತೆ ಸದರಿ ಯೋಜನೆಗಳಡಿ ಕನಿಷ್ಠ ವಯೋಮಾನವನ್ನು 18 ರಿಂದ 35 ವರ್ಷಗಳನ್ನು ನಿಗದಿಪಡಿಸಲಾಗಿದ್ದು, ಅನಕ್ಷರಸ್ಥರನ್ನು ಒಳಗೊಂಡಂತೆ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಸಹ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದು ಜೀವನ ನಡೆಸಲು ಶಕ್ತರಾಗುವಂತೆ ಉದ್ಯೋಗಾವಕಾಶ ಹಾಗೂ ಉದ್ಯಮಶೀಲತೆಗೆ ಅವಕಾಶವನ್ನು ಕಲ್ಪಿಸುವ ಮೂಲಕ ಹಾಗೂ ಸದರಿ ತರಬೇತಿ ಪಡೆದವರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನ ಮಾಡಲಾಗಿದೆ. **<u>ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ</u>** ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ ಜಿ.ಟಿ.ಟಿ.ಸಿ ಸಂಸ್ಥೆ ಮೂಲಕ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಾರ್ಗಸೂಚಿಯಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. **<u>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ</u>** ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ಸಂಸ್ಥೆಯು ವಿವಿಧ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಆ ಕಾರ್ಯಕ್ರಮಗಳು, ಒಂದು ದಿನದ ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮ, ಮೂರು ದಿನಗಳ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮ ಹಾಗೂ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳಾಗಿರುತ್ತವೆ. ಅಭ್ಯರ್ಥಿಗಳ ಆಯ್ಕೆಯನ್ನು ಪತ್ರಿಕಾ ಪ್ರಕಟಣೆ ಮುಖಾಂತರ ಅರ್ಜಿಗಳನ್ನು ಕರೆದು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಆಯ್ಕೆಯ ಮಾನದಂಡವು ಕನಿಷ್ಠ 18 ವರ್ಷ ತುಂಬಿರಬೇಕು. **<u>ದೀನ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ</u>** ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಡೇ-ನಲ್ಮ್ ಅಭಿಯಾನದಡಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. **1) ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ:** ಸದರಿ ಉಪಘಟಕದಡಿ ಮಹಿಳಾ ಸ್ವ-ಸಹಾಯ ಸಂಘ, ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ, ಆವರ್ತಕ ನಿಧಿ ವಿತರಣೆ ಹಾಗೂ ಸಂಘದ ಸದಸ್ಯರುಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

2)ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:
ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಮಾಣಿಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುವುದು.

3)ಸ್ವಯಂ ಉದ್ಯೋಗ ಕಾರ್ಯಕ್ರಮ:

ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00ಲಕ್ಷ, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು.

4)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:
ಸದರಿ ಉಪಘಟಕದಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುವುದು ಹಾಗೂ ಪ್ರಧಾನ ಮಂತ್ರಿ ಆತ್ಮ ನಿರ್ಭರ್ ನಿಧಿ ಯೋಜನೆಯಡಿ ಗುರುತಿಸಲಾದ ಬೀದಿ ವ್ಯಾಪಾರಿಗಳಗೆ ರೂ.10,000/- ಗಳ ಕಿರು ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು.

5)ನಗರದ ವಸತಿ ರಹಿತರಿಗೆ ಆಶ್ರಯ:
ಸದರಿ ಉಪಘಟಕದಡಿ ನಗರದ ವಸತಿ ರಹಿತರಿಗೆ ತಾತ್ಕಾಲಿಕವಾಗಿ ಆಶ್ರಯವನ್ನು ಕಲ್ಪಿಸಲಾಗುತ್ತದೆ.

6)ಸಾಮರ್ಥ್ಯ ಅಭಿವೃದ್ಧಿ ಮತ್ತು ತರಬೇತಿ:
ಸದರಿ ಉಪಘಟಕದಡಿ ಅಭಿಯಾನವನ್ನು ಅನುಷ್ಠಾನಗೊಳಸಲು ತೊಡಗಿಸಿಕೊಂಡಿರುವ ಅಧಿಕಾರಿ / ಸಿಬ್ಬಂದಿಗಳಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ.

ಯೋಜನೆಯಡಿ ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡ :-

- ನಗರದ ವ್ಯಾಪ್ತಿಯ ಅರ್ಹ ಬಡ ಫಲಾನುಭವಿಗಳಾಗಿರಬೇಕು.
- ಫಲಾನುಭವಿಗಳ ಕುಟುಂಬದ ವಾರ್ಷಿಕ ಆದಾಯ ರೂ.1.20 ಲಕ್ಷದ ಒಳಗಿರಬೇಕು.
- ಈ ಕೆಳಕಂಡ ದಾಖಲಾತಿಗಳನ್ನು ಪರಿಗಣಿಸಲಾಗುವುದು
  - ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳೆಂದು ಗುರುತಿಸಲು ರೇಷನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್.
- ತರಬೇತಿಗೆ 16 ರಿಂದ 45 ವರ್ಷ ವಯೋಮಾನ.
- ಗುಂಪು ರಚನೆಗೆ ಶೇ.70 ರಷ್ಟು ನಗರದ ಬಡ ಮಹಿಳೆಯರು ಕಡ್ಡಾಯ.

ವಿಕಲಚೇತನರ ಪುರುಷ ಸ್ವ-ಸಹಾಯ ಗುಂಪು ರಚಿಸಬಹುದು.

<u>ಸಂಜೀವಿನಿ- ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ</u>

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ - ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆಯ ಮೂಲಕ ನಿರುದ್ಯೋಗಿಗಳಗೆ ಉದ್ಯೋಗ ಕಲ್ಪಿಸಲು ಅನುಷ್ಠಾನಗೊಳಸಲಾಗುತ್ತಿರುವ ಯೋಜನೆಗಳು ಈ ಕೆಳಕಂಡಂತಿವೆ.

1. ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ,
2. ಜೀವನೋಪಾಯ ಕಾರ್ಯಕ್ರಮಗಳೆನಂದರೆ ಸಮುದಾಯ ಬಂಡವಾಳ ನಿಧಿ (ಗ್ರಾಮ ಪಂಚಾಯತ್ ಒಕ್ಕೂಟಗಳಗೆ) ಹಾಗೂ ಆರಂಭಿಕ ನಿಧಿ (ಆಡಳತ ವೆಚ್ಚಕ್ಕೆ) ಒದಗಿಸುವುದು.
3. ಆರ್‌ಸೆಟಿ- ಗ್ರಾಮೀಣ ಸ್ವ-ಉದ್ದಿಮೆ ತರಬೇತಿ ಕಾರ್ಯಕ್ರಮ

ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಲ್ಲಿ ಚಾಲ್ತಿಯಲ್ಲಿರುವ ಮಾನದಂಡಗಳು :

1. ನಿಯಮಾನುಸಾರ 18 ರಿಂದ 35 ವಯೋಮಾನದ ಅರ್ಹ ನಿರುದ್ಯೋಗಿ ಯುವಜನತೆಗೆ ಮಹಿಳೆಯರು ವಿಶೇಷ ಚೇತನರು, ಅಲ್ಪಸಂಖ್ಯಾತರು ಹಾಗೂ ಲಿಂಗ ಪರಿವರ್ತನೆಗೊಂಡವರು ಈ

	ಸೌಲಭ್ಯ ಪಡೆಯಬಹುದಾಗಿದೆ. 2. ಬಡತನ ರೇಖೆಯಲ್ಲಿ ಬರುವ ಕುಟುಂಬಗಳ ಸದಸ್ಯರು 3. ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯ ಸದಸ್ಯತ್ವ ಹೊಂದಿರುವ ಕುಟುಂಬದ ಸದಸ್ಯರು. 4. ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಕುಟುಂಬದ ಸದಸ್ಯರು 5. ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬದ ಸದಸ್ಯರು. **ಆರ್‌ಸೆಟಿ– ಗ್ರಾಮೀಣ ಸ್ವ–ಉದ್ದಿಮೆ ತರಬೇತಿ ಕಾರ್ಯಕ್ರಮಗಳು:** ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಭಾರತ ಸರ್ಕಾರದ ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ರಾಜ್ಯದಲ್ಲಿ ಒಟ್ಟು 33 ಆರ್‌ಸೆಟಿ ತರಬೇತಿ ಕೇಂದ್ರಗಳಿದ್ದು, ಅಗತ್ಯವಿರುವ ಎಲ್ಲಾ ಸೌಕರ್ಯ ಹಾಗೂ ಮಾನವ ಸಂಪನ್ಮೂಲಗಳನ್ನು ಹೊಂದಿವೆ. ಇವುಗಳನ್ನು ಸಹಕಾರಿ ಬ್ಯಾಂಕ್‌ಗಳು ನಿರ್ವಹಣೆ ಮಾಡುತ್ತಿವೆ. ಆರ್‌ಸೆಟಿ ಕೇಂದ್ರಗಳು ಗ್ರಾಮೀಣ ಪ್ರದೇಶದ ಬಡತನ ರೇಖೆಗಿಂತ ಕೆಳಗಿರುವ ನಿರುದ್ಯೋಗಿ ಯುವಕ ಯುವತಿಯರಿಗೆ ಸ್ವ–ಉದ್ಯೋಗ ಕುರಿತು ತರಬೇತಿ ನೀಡುತ್ತವೆ.
(ಆ) ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಸರ್ಕಾರವು ಜಾರಿಗೊಳಿಸುತ್ತಿರುವ ಯೋಜನೆ / ಕಾರ್ಯಕ್ರಮಗಳಿಂದ ಉದ್ಯೋಗ ಸೃಷ್ಟಿಗೆ ಅವಕಾಶಗಳಿದೆಯೇ; ಅವಕಾಶಗಳಿದ್ದಲ್ಲಿ, ಯಾವ ರೀತಿಯ ಅವಕಾಶಗಳಿವೆ; (ಮಾಹಿತಿ ನೀಡುವುದು)	<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ :</u> ಹೌದು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳಡಿ ಅಲ್ಪಾವಧಿ ತರಬೇತಿ ಪಡೆದ ಶೇ 70 ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ಷರತ್ತನ್ನು ತರಬೇತುದಾರ ಸಂಸ್ಥೆಗಳಿಗೆ ವಿಧಿಸಲಾಗಿದ್ದು, ಅದರಂತೆ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ ರಾಜ್ಯದ ಎಲ್ಲಾ ಯುವ ಜನರಿಗೆ ಉದ್ಯೋಗ ದೊರಕಿಸುವ ನಿಟ್ಟಿನಲ್ಲಿ, ವರ್ಚುಯಲ್ ಜಾಬ್ ಮೇಳಗಳನ್ನು ನಡೆಸಲಾಗಿದೆ ಹಾಗೂ ಎಲ್ಲಾ ಜಿಲ್ಲೆಗಳಲ್ಲಿ ಮಿನಿ ಉದ್ಯೋಗ ಮೇಳಗಳನ್ನು ಏರ್ಪಡಿಸಿ, ವಿವಿಧ ಕಂಪನಿಗಳನ್ನು ಅಹ್ವಾನಿಸಿ ಉದ್ಯೋಗ ಕಲ್ಪಿಸಿ ಕೊಡಲಾಗಿದೆ ಮತ್ತು ಹಲವಾರು ಕೈಗಾರಿಕಾ ಸಂಸ್ಥೆ / ಸಂಘಗಳೊಂದಿಗೆ (ಉದಾ: ELCIA/Filpkart-Instrakart/ Mysore Industrial Association, ESDM Cluster, Mysore & ಇತರೆ) ಒಡಂಬಡಿಕೆಯನ್ನು ಮಾಡಿಕೊಂಡಿದ್ದು, ತರಬೇತುದಾರ ಸಂಸ್ಥೆಗಳೊಂದಿಗೆ ಹೆಚ್ಚಿನ ಕೌಶಲ್ಯಾಧಾರಿತ ತರಬೇತಿಯೊಂದಿಗೆ ಉದ್ಯೋಗ ದೊರಕಿಸುವ ಕ್ರಮವನ್ನು ಕೈಗೊಳ್ಳಲಾಗಿದೆ.ತರಬೇತಿ ಪಡೆದ ಅಭ್ಯರ್ಥಿಗಳು ಹಾಗೂ ಕೈಗಾರಿಕೋದ್ಯಮಿಗಳನ್ನು ಒಂದೇಡೆ ಸೇರಿಸಿ, ಉದ್ಯೋಗ ದೊರಕಿಸಿ ಕೊಡುವ ನಿಟ್ಟಿನಲ್ಲಿ Skillconnect portal ನ್ನು ಅಭಿವೃದ್ಧಿ ಪಡಿಸಿ, ಉದ್ಯೋಗ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿರುತ್ತದೆ. <u>ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ</u> ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ ಜಿ.ಟಿ.ಟಿ.ಸಿ ಸಂಸ್ಥೆ ಮೂಲಕ ವೃತ್ತಿಪರ ಕೌಶಲ್ಯ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ. <u>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ</u> ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ಸಂಸ್ಥೆಯು ವಿವಿಧ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ತರಬೇತಿಗೊಂಡ ಅಭ್ಯರ್ಥಿಗಳು ಸ್ವಯಂ ಉದ್ಯೋಗಿಗಳಾಗುವ ಅವಕಾಶವಿರುತ್ತದೆ. <u>ದೀನ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ</u> ಡೇ–ನಲ್ಮ್ ಅಭಿಯಾನದಡಿ ಈ ಕೆಳಕಂಡಂತೆ ಅವಕಾಶಗಳಿರುತ್ತವೆ. **1)ಸ್ವಯಂ ಉದ್ಯೋಗ ಕಾರ್ಯಕ್ರಮ:** ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00 ಲಕ್ಷ, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ–ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು.

2)ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:
ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುವುದು.

3)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:
ಸದರಿ ಉಪಘಟಕದಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುವುದು ಹಾಗೂ ಪ್ರಧಾನ ಮಂತ್ರಿ ಆತ್ಮ ನಿರ್ಭರ್ ನಿಧಿ ಯೋಜನೆಯಡಿ ಗುರುತಿಸಲಾದ ಬೀದಿ ವ್ಯಾಪಾರಿಗಳಿಗೆ ರೂ.10,000/- ಗಳ ಕಿರು ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು.

ಸಂಜೀವಿನಿ- ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ

ಡಿಡಿಯುಜಿಕೆವೈನಡಿ ಮತ್ತು ಆರ್‌ಸೆಟಿ ಕಾರ್ಯಕ್ರಮದಡಿ ಅನುಮೋದಿತ ಟ್ರೇಡ್‌ಗಳಲ್ಲಿ ಬೇಡಿಕೆ ಮತ್ತು ಅರ್ಹತೆ ಆಧರಿಸಿ ತರಬೇತಿಗೊಳಪಡುವ ಶಿಬಿರಾರ್ಥಿಗಳಿಗೆ ಯಶಸ್ವಿ ತರಬೇತಿ ನಂತರ ಪ್ರಮಾಣ ಪತ್ರ ನೀಡಲಾಗುವುದು. ತದನಂತರ ಯಶಸ್ವಿಯಾಗಿ ತರಬೇತಿ ಹೊಂದಿದವರ ಪೈಕಿ ಶೇ 70 ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ. ಅಂತೆಯೇ ಆರ್‌ಸೆಟಿಯಡಿ ತರಬೇತಿ ಹೊಂದಿದ ನಂತರ ಸ್ವ ಉದ್ಯೋಗ ಮಾಡಿಕೊಳ್ಳಲು ಆರ್ಥಿಕ ನೆರವಿಗಾಗಿ / ಸಾಲ ಸಲುವಾಗಿ ಆರ್‌ಸೆಟಿ ಕೇಂದ್ರಗಳು ಬೆಂಬಲ ನೀಡುತ್ತವೆ.

(ಇ) ಈ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಕೈಗೊಂಡಿರುವ ಯೋಜನೆ / ಕಾರ್ಯಕ್ರಮಗಳು ಯಾವುವು; ಇದಕ್ಕೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಖರ್ಚಾಗಿರುವ ಅನುದಾನ ಎಷ್ಟು; (ಯೋಜನೆ / ಕಾರ್ಯಕ್ರಮವಾರು ವಿವರ ನೀಡುವುದು)

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ :

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಹಾಸನ ಜಿಲ್ಲೆಗೆ ಯಾವುದೇ ಪ್ರತ್ಯೇಕ ಅನುದಾನ ಬಿಡುಗಡೆಗೊಳಿಸುವ ಸೌಲಭ್ಯವಿರುವುದಿಲ್ಲ, ಆದಾಗ್ಯೂ ಸದರಿ ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳಡಿ ಅಭ್ಯರ್ಥಿಗಳಿಗೆ ನೀಡಲಾದ ಉಚಿತ ಕೌಶಲ್ಯಾಧಾರಿತ ತರಬೇತಿ ಯೋಜನೆಯ ತರಬೇತಿ ವೆಚ್ಚವನ್ನು ಮಾತ್ರ ಬಿಡುಗಡೆಗೊಳಿಸಲಾಗಿರುತ್ತದೆ. (ವರ್ಷವಾರು ವಿವರ ಮಾಹಿತಿ ಈ ಕೆಳಕಂಡಂತೆ ಇದೆ)

ಕ್ರಮ ಸಂಖ್ಯೆ	ವರ್ಷ	ಬಿಡುಗಡೆಗೊಂಡ ತರಬೇತಿ ವೆಚ್ಚ (ರೂ.ಲಕ್ಷಗಳಲ್ಲಿ)
01	2017-18	149.14
02	2018-19	118.80
03	2019-20	378.76
ಒಟ್ಟು		646.70

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ ಜಿ.ಟಿ.ಟಿ.ಸಿ ಹಾಸನ ಕೇಂದ್ರದ ಮೂಲಕ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಕೌಶಲ್ಯ ತರಬೇತಿಗಳನ್ನು ನೀಡಲಾಗಿದೆ. ಕಳೆದ 3 ವರ್ಷಗಳ ಕೌಶಲ್ಯ ತರಬೇತಿ ವೆಚ್ಚದ ವಿವರ ಈ ಕೆಳಕಂಡಂತಿದೆ;

(ರೂ.ಲಕ್ಷಗಳಲ್ಲಿ)

ವರ್ಷ	ಬಿಡುಗಡೆಯಾಗಿರುವ ಅನುದಾನ	ಖರ್ಚಾಗಿರುವ ಅನುದಾನ
2018-19	-	-
2019-20	13.00	13.00
2020-21	11.00	11.00

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ

ಹಾಸನ ಜಿಲ್ಲೆಯಲ್ಲಿ ಕೈಗೊಂಡಿರುವ ಯೋಜನೆ/ಕಾರ್ಯಕ್ರಮಗಳು, ಬಿಡುಗಡೆಯಾದ ಅನುದಾನ ಮತ್ತು ಖರ್ಚು ಮಾಡಲಾದ ಅನುದಾನಗಳ ವರ್ಷವಾರು ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ವರ್ಷ	ಯೋಜನೆ/ಕಾರ್ಯಕ್ರಮಗಳು	ಬಿಡುಗಡೆಯಾದ ಅನುದಾನ	ಖರ್ಚು ಮಾಡಲಾದ ಅನುದಾನ
2018-19	1. ದಿಶಾ ಔಟ್ ರೀಚ್ ಕಾರ್ಯಕ್ರಮ 2. ದಿಶಾ ರೆಡಿ ಮತ್ತು ದಿಶಾ ಸ್ಟಡಿ ಕಾರ್ಯಕ್ರಮ	2.82	2.82
2019-20	1. ಕೌಶಲ್ಯ ಉದ್ಯೋಗ ಔಟ್ ರೀಚ್ ಕಾರ್ಯಕ್ರಮ 2. ಕೌಶಲ್ಯ ಉದ್ಯೋಗ ರೆಡಿ ಮತ್ತು ದಿಶಾ ಸ್ಟಡಿ ಕಾರ್ಯಕ್ರಮ 3. ಕೌಶಲ್ಯ ಉದ್ಯೋಗ ವಸತಿ ರಹಿತ ಮತ್ತು ವಸತಿ ಸಹಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ	5.27	5.27
2020-21	30 ದಿನಗಳ ಕೌಶಲ್ಯ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ	4.50	4.50

ದೀನ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ

ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಕೈಗೊಂಡಿರುವ ಯೋಜನೆ / ಕಾರ್ಯಕ್ರಮಗಳ ಅನುಷ್ಠಾನಗೊಳಿಸಲು ಬಿಡುಗಡೆಯಾದ ಹಾಗೂ ಖರ್ಚಾದ ಅನುದಾನದ ವಿವರವನ್ನು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಕೌಶಲ್ಯ ಮಿಷನ್, ಹಾಸನ ಜಿಲ್ಲೆ ರವರು ದೃಢೀಕರಿಸಿ ಸಲ್ಲಿಸಿದ್ದು, ಸದರಿ ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಸಂಜೀವಿನಿ- ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ

ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ನಿಂದ ಬಿಡುಗಡೆಯಾಗಿರುವ ಮತ್ತು ವೆಚ್ಚವಾ(ಆವರಣದಲ್ಲಿರುವಂತೆ)ಗಿರುವ ವಿವರಗಳು ಕೆಳಕಂಡಂತಿವೆ.

ವರ್ಷ	ಯೋಜನೆ/ಕಾರ್ಯಕ್ರಮ	(ರೂ.ಲಕ್ಷಗಳಲ್ಲಿ)	
		ಬಿಡುಗಡೆ	ವೆಚ್ಚ
2018-19	ಎನ್‌ಆರ್‌ಎಲ್‌ಎಂ (ಸಿಐಎಫ್)	185.20	217.21
	ಆರ್‌ಜಿಸಿವೈ	448.29	446.52
	ಆರ್‌ಸೆಟಿ	0	0
2019-20	ಎನ್‌ಆರ್‌ಎಲ್‌ಎಂ	2039.19	942.97
	ಆರ್‌ಜಿಸಿವೈ	0	14.90
	ಆರ್‌ಸೆಟಿ	13.55	10.54
2020-21	ಎನ್‌ಆರ್‌ಎಲ್‌ಎಂ	2026.78	2667.68
	ಆರ್‌ಜಿಸಿವೈ	0	971
	ಆರ್‌ಸೆಟಿ	39.10	24.23

(ಈ) ಈ ಯೋಜನೆ / ಕಾರ್ಯಕ್ರಮಗಳನ್ನು ಸದುಪಯೋಗ ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ಒದಗಿಸುವುದು)	**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ :**

ಇಲ್ಲಿಯವರೆಗೆ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ 5683 ಅಭ್ಯರ್ಥಿಗಳಿಗೆ ಹಾಗೂ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ 1044 ಅಭ್ಯರ್ಥಿಗಳು ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದ ಫಲಾನುಭವಿಗಳಾಗಿರುತ್ತಾರೆ. (ತಾಲ್ಲೂಕು ವಾರು ವಿವರ ಈ ಕೆಳಕಂಡಂತೆ ಇದೆ)

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ	ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ
01	ಹಾಸನ	ಹಾಸನ	1969	285
02		ಅರಸೀಕೆರೆ	1087	-
03		ಚನ್ನರಾಯಪಟ್ಟಣ	354	-
04		ಹೊಳೆನರಸೀಪುರ	505	759
05		ಸಕಲೇಶಪುರ	157	-
06		ಆಲೂರು	397	-
07		ಅರಕಲಗೂಡು	563	-
08		ಬೇಲೂರು	651	-
ಒಟ್ಟು			5683	1044

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ ಜಿ.ಟಿ.ಟಿ.ಸಿ ಸಂಸ್ಥೆ ಮೂಲಕ ವರ್ಷ 2020-21ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಒಟ್ಟು 2154 ಫಲಾನುಭವಿಗಳಿಗೆ ತರಬೇತಿ ನೀಡಲಾಗಿದೆ.
ಜಿಲ್ಲೆ, ತಾಲ್ಲೂಕುವಾರು ವಿವರ ಅನುಬಂಧ-1 ರಲ್ಲಿ ಅಡಕಗೊಳಿಸಲಾಗಿದೆ.

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ

ಹಾಸನ ಜಿಲ್ಲೆಯಲ್ಲಿ ಕೈಗೊಂಡಿರುವ ಯೋಜನೆ/ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಂಡ ಫಲಾನುಭವಿಗಳ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.			
ತಾಲ್ಲೂಕು	2018-19	2019-20	2020-21
ಹಾಸನ	1555	225	26
ಚೆನ್ನರಾಯಣಪಟ್ಟಣ	685	85	6
ಸಕಲೇಶಪುರ	430	80	6
ಆಲೂರು	170	35	0
ಅರಕಲಗೂಡು	200	65	8
ಅರಸಿಕೇರೆ	250	70	1
ಬೇಲೂರು	15	70	5
ಹೊಳೆನರಸೀಪುರ	555	55	100
ಒಟ್ಟು	3860	685	152

	ದೀನ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಸದರಿ ಯೋಜನೆಯ ಕಾರ್ಯಕ್ರಮಗಳನ್ನು ಸದುಪಯೋಗ ಪಡೆದುಕೊಂಡ ಫಲಾನುಭವಿಗಳ ವಿವರವನ್ನು ತಾಲ್ಲೂಕುವಾರು ಅನುಬಂಧ-2ರಲ್ಲಿ ಲಗತ್ತಿಸಿದೆ. **ಸಂಜೀವಿನಿ- ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ** ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಕಾರ್ಯಕ್ರಮದಡಿ ಬೇಡಿಕೆ ಮತ್ತು ಅರ್ಹತೆ ಮಾನದಂಡಗಳನ್ವಯ ಜಿಲ್ಲಾವಾರು ಮಾತ್ರ ಆರ್ಥಿಕ ಮತ್ತು ಭೌತಿಕ ಗುರಿ ನೀಡಲಾಗಿದೆ. ಹೀಗಾಗಿ ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಒಟ್ಟಾರೆಯಾಗಿ ಯೋಜನೆಗಳ ಲಾಭ ಪಡೆದುಕೊಂಡ ಸ್ವಸಹಾಯ ಗುಂಪುಗಳು-55159, ಆರ್‌ಸೆಟಿಯಡಿ ಸ್ವ ಉದ್ಯೋಗ ಸಲುವಾಗಿ ತರಬೇತಿ ಪಡೆದ ಅಭ್ಯರ್ಥಿಗಳು -1884 ಮತ್ತು ಡಿಡಿಯುಜಿಕೆವೈನಡಿ ತರಬೇತಿ ಹೊಂದಿ ಉದ್ಯೋಗಾವಕಾಶ ಒದಗಿಸಿಕೊಂಡಿರುವ ಫಲಾನುಭವಿಗಳು-2311.

ಸಂಖ್ಯೆ: ಕೌಉಜಇ 54 ಉಜೀಪ್ರ 2021

(ಡಾ|| ಅಶ್ವಥ್ ನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.

ಶ್ರೀ ಎಂ.ಎ.ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 883ಕ್ಕೆ
(ಜಿಟಿಟಿಸಿ)

"ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ" {cmkky} : 2020-21

ತಾಲ್ಲೂಕುವಾರು/ಕೇಂದ್ರವಾರು ಫಲಾನುಭವಿಗಳ ಸಂಖ್ಯೆ :

ಅನುಬಂಧ-1

Sl. No.	Taluk wise	GTTC Centre	No. of Candidates Trained
1	BANGALORE	BENGALURU	197
4	MYSURU	MYSURU	7
5	HASSAN	HASSAN	55
6	KADUR	KADUR	10
7	KOLAR	KOLAR	22
8	GOWRIBIDANUR	GOWRIBIDANUR	42
9	KANAKAPURA	KANAKAPURA	90
10	TUMKUR	TUMKURU	79
11	MADDUR	MADDUR	56
12	GUNDLUPET	GUNDLUPET	19
13	MANGALURU	MANGALURU	12
14	UDUPI	UDUPI	61
15	SHIVAMOGGA	SHIVAMOGGA	117
16	BELAGAVI	BELAGAVI	180
17	CHIKKODI	CHIKKODI	51
18	DANDELI	DANDELI	55
19	DHARWAD	DHARWAD	163
20	GOKAK	GOKAK	60
21	HANGAL	HANGAL	84
22	LINGASUGUR	LINGASUGUR	99
23	HUBLI	HUBLI	241
24	HARIHARA	HARIHARA	96
25	HOSPET	HOSPET	40
26	HUMNABAD	HUMNABAD	118
27	KALABURAGI	KALABURAGI	194
28	HUNUGUND	KUDALASANGAMA	6
		Total	2154

ಶ್ರೀ ಎಂ.ಎ.ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 883ಕ್ಕೆ,
ಅನುಬಂಧ-1 (ಡೇ-ನಲ್ಮ್)

ಕ್ರ ಸಂ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಉಪಘಟಕಗಳ ವಿವರ	2018-19		2019-20		2020-21	
			ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು
1	ನಗರಸಭೆ ಹಾಸನ	ಎಸ್.ಇ.ಪಿ	0	0	0	0	0	0
		ಎಸ್.ಎಂ & ಐಡಿ	0	0	0	200000	0	0
		ಇ.ಎಸ್.ಟಿ&ಪಿ	0	0	0	0	0	0
		ಎಸ್.ಯು.ಎಸ್.ವಿ	0	0	0	0	0	0
		ಎಸ್.ಯು.ಹೆಚ್	600000	554000	983000	783500	1282188	0
2	ನಗರಸಭೆ ಅರಸೀಕೆರೆ	ಎಸ್.ಇ.ಪಿ	0	0	24000	24000	0	0
		ಎಸ್.ಎಂ & ಐಡಿ	0	0	30000	30000	0	0
		ಇ.ಎಸ್.ಟಿ&ಪಿ	0	0	0	0	0	0
		ಎಸ್.ಯು.ಎಸ್.ವಿ	0	0	22000	22000	0	0
		ಎಸ್.ಯು.ಹೆಚ್	0	0	25000	25000	0	0
3	ಪುರಸಭೆ, ಚನ್ನರಾಯಪಟ್ಟಣ	ಎಸ್.ಇ.ಪಿ	0	0	0	0	0	0
		ಎಸ್.ಎಂ & ಐಡಿ	0	50000	0	55000	0	0
		ಇ.ಎಸ್.ಟಿ&ಪಿ	0	41500	0	0	0	0
		ಎಸ್.ಯು.ಎಸ್.ವಿ	0	72000	0	0	0	52000
		ಎಸ್.ಯು.ಹೆಚ್	15000	1500	0	0	0	0
4	ಪುರಸಭೆ, ಹೊಳೆನರಸೀಪುರ	ಎಸ್.ಇ.ಪಿ	0	0	0	0	0	0
		ಎಸ್.ಎಂ & ಐಡಿ	0	0	0	96444	0	10000
		ಇ.ಎಸ್.ಟಿ&ಪಿ	0	0	125000	289392	0	66166
		ಎಸ್.ಯು.ಎಸ್.ವಿ	0	0	303738	240327	0	27595
		ಎಸ್.ಯು.ಹೆಚ್	15000	15000	15000	0	0	0
5	ಪುರಸಭೆ, ಸಕಲೇಶಪುರ	ಎಸ್.ಇ.ಪಿ	0	0	0	0	0	0
		ಎಸ್.ಎಂ & ಐಡಿ	0	0	171559	138000	0	0
		ಇ.ಎಸ್.ಟಿ&ಪಿ	0	0			0	135000
		ಎಸ್.ಯು.ಎಸ್.ವಿ	0	0		0	40000	42000
		ಎಸ್.ಯು.ಹೆಚ್	15000	15000	0	0	0	0
6	ಪುರಸಭೆ, ಬೇಲೂರು	ಎಸ್.ಇ.ಪಿ	0	0	0	0	0	0
		ಎಸ್.ಎಂ & ಐಡಿ	0	101660	0	13521	0	20375
		ಇ.ಎಸ್.ಟಿ&ಪಿ	0	275576	0	26068	0	0
		ಎಸ್.ಯು.ಎಸ್.ವಿ	0	0	34000	27642	296000	21645
		ಎಸ್.ಯು.ಹೆಚ್	15000	15000	15000	0	0	0
7	ಪಟ್ಟಣ ಪಂಚಾಯಿತಿ ಅರಕಲಗೂಡು	ಎಸ್.ಇ.ಪಿ	0	0	0	0	0	0
		ಎಸ್.ಎಂ & ಐಡಿ	0	0	221082	99868	124035	23258
		ಇ.ಎಸ್.ಟಿ&ಪಿ	0	0	0	554	0	118
		ಎಸ್.ಯು.ಎಸ್.ವಿ	0	0	0	118	156570	83952
		ಎಸ್.ಯು.ಹೆಚ್	10000	10000	0	0	0	0
8	ಪಟ್ಟಣ ಪಂಚಾಯಿತಿ ಆಲೂರು	ಎಸ್.ಇ.ಪಿ	50000	11000	0	9059	0	0
		ಎಸ್.ಎಂ & ಐಡಿ	0	10000	0	86400	0	9540
		ಇ.ಎಸ್.ಟಿ&ಪಿ	0	69000	0	79520	0	0
		ಎಸ್.ಯು.ಎಸ್.ವಿ	0	0	0	00	0	16713
		ಎಸ್.ಯು.ಹೆಚ್	10000	10000	0		0	0

ಶ್ರೀ ಎಂ.ಎ.ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 883ಕ್ಕೆ,
ಅನುಬಂಧ-2 (ಡೇ-ನಲ್ಮ್)

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಉಪಘಟಕಗಳ ವಿವರ	ಈ ಯೋಜನೆ/ಕಾರ್ಯಕ್ರಮಗಳನ್ನು ಸದುಪಯೋಗ ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು
1	ನಗರಸಭೆ, ಹಾಸನ	ಎಸ್.ಇ.ಪಿ- ಎಸ್.ಎಂ & ಐಡಿ ಇ.ಎಸ್.ಟಿ&ಪಿ ಎಸ್.ಯು.ಎಸ್.ವಿ ಎಸ್.ಯು.ಹೆಚ್	ಸದುಪಯೋಗ ಪಡೆದುಕೊಂಡ ಫಲಾನುಭವಿಗಳ-850
2	ನಗರಸಭೆ, ಅರಸೀಕೆರೆ	ಎಸ್.ಇ.ಪಿ ಎಸ್.ಎಂ & ಐಡಿ ಇ.ಎಸ್.ಟಿ&ಪಿ ಎಸ್.ಯು.ಎಸ್.ವಿ ಎಸ್.ಯು.ಹೆಚ್	ಸದುಪಯೋಗ ಪಡೆದುಕೊಂಡ ಫಲಾನುಭವಿಗಳ-382
3	ಪುರಸಭೆ, ಚನ್ನರಾಯಪಟ್ಟಣ	ಎಸ್.ಇ.ಪಿ ಎಸ್.ಎಂ & ಐಡಿ ಇ.ಎಸ್.ಟಿ&ಪಿ ಎಸ್.ಯು.ಎಸ್.ವಿ ಎಸ್.ಯು.ಹೆಚ್	ಸದುಪಯೋಗ ಪಡೆದುಕೊಂಡ ಫಲಾನುಭವಿಗಳ-294
4	ಪುರಸಭೆ, ಹೊಳೆನರಸೀಪುರ	ಎಸ್.ಇ.ಪಿ ಎಸ್.ಎಂ & ಐಡಿ ಇ.ಎಸ್.ಟಿ&ಪಿ ಎಸ್.ಯು.ಎಸ್.ವಿ ಎಸ್.ಯು.ಹೆಚ್	ಸದುಪಯೋಗ ಪಡೆದುಕೊಂಡ ಫಲಾನುಭವಿಗಳ-70
5	ಪುರಸಭೆ, ಸಕಲೇಶಪುರ	ಎಸ್.ಇ.ಪಿ ಎಸ್.ಎಂ & ಐಡಿ ಇ.ಎಸ್.ಟಿ&ಪಿ ಎಸ್.ಯು.ಎಸ್.ವಿ ಎಸ್.ಯು.ಹೆಚ್	ಸದುಪಯೋಗ ಪಡೆದುಕೊಂಡ ಫಲಾನುಭವಿಗಳ-204
6	ಪುರಸಭೆ, ಬೇಲೂರು	ಎಸ್.ಇ.ಪಿ ಎಸ್.ಎಂ & ಐಡಿ ಇ.ಎಸ್.ಟಿ&ಪಿ ಎಸ್.ಯು.ಎಸ್.ವಿ ಎಸ್.ಯು.ಹೆಚ್	ಸದುಪಯೋಗ ಪಡೆದುಕೊಂಡ ಫಲಾನುಭವಿಗಳ-75
7	ಪಟ್ಟಣ ಪಂಚಾಯಿತಿ ಅರಕಲಗೂಡು	ಎಸ್.ಇ.ಪಿ ಎಸ್.ಎಂ & ಐಡಿ ಇ.ಎಸ್.ಟಿ&ಪಿ ಎಸ್.ಯು.ಎಸ್.ವಿ ಎಸ್.ಯು.ಹೆಚ್	ಸದುಪಯೋಗ ಪಡೆದುಕೊಂಡ ಫಲಾನುಭವಿಗಳ-321